**ಓ.ಎಸ್. 89/2023 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 08.07.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಹಾಗೂ ನನ್ನ ಸಹೋದರಿ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ನನ್ನ ತಂದೆ ಸಯ್ಯಪ್ಪನಹಳ್ಳಿಯವರು. ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು. ಪಿತ್ರಾರ್ಜಿತ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ, ಸಾಕ್ಷಿ ನಮ್ಮ ತಂದೆಗೆ ಆಸ್ತಿಗಳು ಬಂದಿಲ್ಲ ಎನ್ನುತ್ತಾರೆ. ದಾವೆಯಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿ. ನನ್ನ ತಾತನ ಹೆಸರು ಕರೀಗೌಡ. ನನ್ನ ತಾತನಿಗೆ ತಿಮ್ಮರಾಯಿಗೌಡ ಎಂಬ ಹೆಸರು ಇತ್ತು ಎಂದರೆ ಸರಿಯಲ್ಲ. ನನ್ನ ತಂದೆಯ ಜೊತೆ 3 ಜನ ಸಹೋದರರು ಹಾಗೂ ಇಬ್ಬರು ಸಹೋದರಿಯರು ಇದ್ದಾರೆ, ಅವರ ಹೆಸರು ಯಾಲಕ್ಕಿಗೌಡ, ತಿಮ್ಮೇಗೌಡ, ಪುಟ್ಟೇಗೌಡ, ನೀಲೇಗೌಡ, ಪುಟ್ಟಮ್ಮ ಹಾಗೂ ಹೊನ್ನಮ್ಮ. ನನ್ನ ಸಹೋದರಿ ಶಶಿಕಲಾ 20 ವರ್ಷದ ಹಿಂದೆ ಮೃತಪಟ್ಟಿದ್ದಾರೆ. ನನ್ನ ಸಹೋದರಿಗೆ ಮಕ್ಕಳು ಇದ್ದಾರೆ. ನನ್ನ ಸಹೋದರಿಯ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

**ಮುಂದುವರಿದ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಎಂ.ಮಂಜುನಾಥ)**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಪಾಂಡವಪುರ**